



## ನಕ್ಕು ಬಿಡಿ

ಗುಂಡ (ಫೋನಿನಲ್ಲಿ): 'ಇನ್ಸ್‌ಪೆಕ್ಟರ್ ನನ್ನ ಹೆಂಡತಿ ಓಡಿಹೋಗಿದ್ದಾಳೆ.'

ಅಧಿಕಾರಿ: 'ರೀ ಸ್ವಾಮಿ ಇದು ಪೊಲೀಸ್ ಸ್ಟೇಶನ್ ಅಲ್ಲ. ರೈಲ್ವೇ ಸ್ಟೇಶನ್.'

ಗುಂಡ: 'ಸಂತೋಷ ಹಂಚಿಕೊಳ್ಳೋಕೆ ಯಾವ ಸ್ಟೇಶನ್ ಆದ್ರೆ ಏನು?'

★★★

ಭಿಕ್ಷುಕ: 'ಅಮ್ಮಾ ತಾಯಿ ಭಿಕ್ಷೆ ಕೊಡಿ! ನಾನು ಮೂಗ'

ಮನೆಯಾಕೆ: 'ಹೌದಾ? ಮುಂದೆ ಹೋಗಪ್ಪ. ನನಗೆ ಕಿವಿ ಕೇಳೋಲ್ಲ.'

★★★

ಮಾರಾಟಗಾರ: 'ಮೇಡಂ ಈ ಅಗರಬತ್ತಿ ಎಷ್ಟು ಚೆನ್ನಾಗಿದೆಯೆಂದರೆ ನಿಮ್ಮ ಮನೇಲಿ ಇದನ್ನು ಹಚ್ಚಿದರೆ ಪಕ್ಕದ ಮನೆಯವರಿಗೂ ಅದರ ಪರಿಮಳ ಹೋಗುತ್ತೆ.'

ಗೃಹಿಣಿ: 'ಅರೆ ಹೌದಾ? ಹಾಗಾದರೆ ಇದನ್ನು ಪಕ್ಕದ ಮನೆಯವರಿಗೆ ಕೊಟ್ಟುಬಿಡಿ.'

★★★

ನಾಣಿ: 'ನೀವು ಯಾವಾಗಲೂ ಹದಿನೆಂಟು ಮಂದಿ ಒಟ್ಟಿಗೇ ಸಿನೆಮಾ ನೋಡಲು ಹೋಗುತ್ತೀರಲ್ಲ ಯಾಕೆ?'

ಗುಂಡ: 'ಥಿಯೇಟರ್ ಮುಂದೆ ಹದಿನೆಂಟರೊಳಗೆ ಇರುವವರಿಗೆ ಪ್ರವೇಶವಿಲ್ಲ' ಎಂಬ ಬೋರ್ಡಿದೆ. ಅದಕ್ಕೆ.

ಸಂಗ್ರಹ: **ಎಂ.ಕೆ. ಮಂಜುನಾಥ್, ಬೆಂಗಳೂರು**



### ರಹಸ್ಯ

ಗಿರಾಕಿ: ಒಳ್ಳೆಯ ರಹಸ್ಯಮಯ ಪತ್ತೇದಾರಿ ಕಾದಂಬರಿ ಇದ್ದರೆ ಕೊಡು.

ಅಂಗಡಿಯವ: ಇದನ್ನು ತಗೊಳ್ಳಿ ಸರ್. ನಾನೂ ಓದಿದೀನಿ, ರಹಸ್ಯ ಅಂದ್ರೆ ರಹಸ್ಯ! ಕೊನೆಯ ಪುಟದ ತನಕ ಇದೆಲ್ಲಾ ಹೆಂಡ್ತೀದೇ ಕೆಲಸ ಅಂತಾ ನಿಮಗೆ ಗೊತ್ತಾಗೋದೇ ಇಲ್ಲ.

### ಜೋಡಿ ಸಾಕ್ಸ್

ಶಾಲೆಗೆ ಬಂದ ವಿದ್ಯಾರ್ಥಿಗಳ ಸಮವಸ್ತ್ರ ಸರಿಯಾಗಿದೆಯೇ ಎಂದು ಟೀಚರ್ ತಪಾಸಣೆ ನಡೆಸಿದ್ದರು.

ಟೀಚರ್: 'ಏನೋ! ಪುಟ್ಟ ಹೀಗೆ ಬಂದಿದ್ದೀಯಾ? ಒಂದು ಕಾಲಿಗೆ ನೀಲಿ ಸಾಕ್ಸ್, ಮತ್ತೊಂದು ಕಾಲಿಗೆ ಕೆಂಪು ಸಾಕ್ಸ್. ಜೋಡಿ ಸಾಕ್ಸ್ ಇಲ್ಲವೇ?

ಪುಟ್ಟ: ಇದೇ ತರಹದ ಇನ್ನೊಂದು ಜೋಡಿ ಮನೆಯಲ್ಲಿದೆ ಟೀಚರ್!

### ಪತ್ರೋತ್ತರ

ಜೈಲಿನಲ್ಲಿದ್ದ ಗಂಡನಿಗೆ ಹೆಂಡತಿ ಪತ್ರ ಬರೆದಳು.

ಮನೆಯ ಹಿತ್ತಲು ಕಾಡಿನಂತಾಗಿದೆ. ಅಲ್ಲಿ ರಾಗಿಯನ್ನು ಬೆಳೆಯಬೇಕು ಅಂದುಕೊಂಡಿದ್ದೀನಿ. ಏನು ಮಾಡಲಿ?

ಜೈಲಿನ ಅಧಿಕಾರಿಗಳು ಪತ್ರವನ್ನು ಓದೇ ಓದುತ್ತಾರೆ ಎಂಬುದನ್ನು ತಿಳಿದಿದ್ದ ಗಂಡ ಹೀಗೆ ಉತ್ತರ ಬರೆದ: 'ಈಗಲೇ ಬೇಡ. ನೀನು ಹಿತ್ತಲಿಗೆ ಹೋಗಲೇ ಬೇಡ. ಏಕೆಂದರೆ ಎಲ್ಲ ಹಣವನ್ನು ನಾನು ಅಲ್ಲೇ ಹುಗಿದು ಇಟ್ಟಿದ್ದೇನೆ.'

ಇದಾದ ಒಂದು ವಾರದ ನಂತರ ಮತ್ತೆ ಹೆಂಡತಿಯ ಪತ್ರ ಬಂತು.

'ಹೇಳಿದ್ರೆ ನಂಬೊಲ್ಲ ನೀವು. ಒಂದು ವಾರದ ಹಿಂದೆ ಯಾರೋ ರಾತ್ರೋರಾತ್ರಿ ನಮ್ಮ ಹಿತ್ತಲಿನಲ್ಲಿ ಚೆನ್ನಾಗಿ ಅಗೆದು ಹಸನು ಮಾಡಿದ್ದಾರೆ.'

ಗಂಡ ಉತ್ತರ ಬರೆದ: 'ಈಗ ರಾಗಿ ಬೆಳೆಯಲು ಸಕಾಲ. ಕೆಲಸ ಆರಂಭಿಸು'

**-ಜಗದೀಶ ಗಂ. ದಲಭಂಜನ**




